2019 ಕ.ತೀ.ವ 380

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಬಿ. ಬಜಂತ್ರಿ

## ಶ್ರೀಮತಿ ಚೆನ್ನಮ್ಮ –ವಿರುದ್ಧ– ನ್ಯಾಷನಲ್ ಎಜುಕೇಷನ್ ಸೊಸೈಟಿ, ಕರ್ನಾಟಕ ಮತ್ತು ಮತ್ತೊಬ್ಬರು*

**ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 92ರ 3(ಬಿ) ಮತ್ತು (ಸಿ) ಪ್ರಕರಣಗಳು**

**ಅರ್ಜಿದಾರಳು ಎರಡನೇ ಎದುರುದಾರ – ಕಾಲೇಜಿನಲ್ಲಿ ಪರಿಚಾರಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ. ಅವಳನ್ನು ಅಮಾನತು ಆದೇಶದಲ್ಲಿ ತಿಳಿಸಲಾದಂತೆ ಕೆಲವು ದುರ್ನಡತೆಯ ಆಧಾರದ ಮೇಲೆ ದಿನಾಂಕ: 15.5.2014ರಂದು ಅಮಾನತ್ತಿನಲ್ಲಿ ಇರಿಸಲಾಗಿದೆ. ಅಮಾನತ್ತಿನ ಆದೇಶದಿಂದ ಬಾಧಿತಳಾಗಿ ಮೇಲಿನ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾಳೆ.**

**ಕರ್ನಾಟಕ ಶಿಕ್ಷಣ ಅಧಿನಿಯಮದ 92ನೇ ಪ್ರಕರಣದ 3(ಬಿ) ಮತ್ತು (ಸಿ) ಪ್ರಕರಣಗಳ ಮೇರೆಗೆ,**

**ಕರ್ನಾಟಕ ಶಿಕ್ಷಣ ಅಧಿನಿಯಮದ 93(3)(ಎ)(i) ಪ್ರಕರಣದ ಮೇರೆಗೆ ಆಡಳಿತ ಸಮಿತಿಯು, ನೌಕರನನ್ನು ಅಮಾನತ್ತಿನಲ್ಲಿಡಬಹುದಾಗಿದ್ದು, ಅದು ಈ ಮುಂದಿನಂತಿರುತ್ತದೆ:**

***"(3) ಒಬ್ಬ ಶಿಕ್ಷಕ ಅಥವಾ ಇತರ ನೌಕರನನ್ನು ಆಡಳಿತ ಸಮಿತಿಯು ಅಮಾನತ್ತಿನಲ್ಲಿಡಬಹುದು.–***

*ರಿ.ಅ.ಸಂ. 22118/2014 (ಎಸ್–ಆರ್‌ಇಎಸ್), ದಿನಾಂಕ 20ನೇ ಫೆಬ್ರವರಿ, 2015.

*(i) ಶಿಸ್ತು ವ್ಯವಹರಣೆಗಳನ್ನು ಅವನ ವಿರುದ್ಧ ಉದ್ದೇಶಿಸಲಾಗಿದ್ದಲ್ಲಿ ಅಥವಾ ಇತ್ಯರ್ಥದಲ್ಲಿದ್ದಲ್ಲಿ; ಅಥವಾ*

*(ii) ಯಾವುದೇ ಆಪರಾಧಿಕ ಅಪರಾಧಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧ ತನಿಖೆಯನ್ನು ಅಥವಾ ಅಧಿವಿಚಾರಣೆಯನ್ನು ಮಾಡುವಂತಿದ್ದಲ್ಲಿ;*

*(ಬಿ) ಅಂಥ ಅಮಾನತನ್ನು ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ಜಾರಿಯಲ್ಲಿಡತಕ್ಕದ್ದಲ್ಲ: ಪರಂತು, ಆರು ತಿಂಗಳುಗಳ ಒಳಗೆ ವಿಚಾರಣೆಯನ್ನು ಮಾಡಲು ಉದ್ದೇಶಿಸಿದ್ದರೆ, ಕಾರ್ಯದರ್ಶಿಯು ಸಕ್ಷಮ ಪ್ರಾಧಿಕಾರಿಗೆ ವಿಷಯವನ್ನು ವರದಿ ಮಾಡತಕ್ಕದ್ದು. ಆಡಳಿತ ಮಂಡಳಿಯ ನಿಯಂತ್ರಣವನ್ನು ಮೀರಿರುವ ಸನ್ನಿವೇಶಗಳ ಕಾರಣದಿಂದ ವಿಚಾರಣೆಯನ್ನು ಹಾಗೆ ಉದ್ದೇಶಿಸಬಹುದಾಗಿದೆಯೆಂದು ಅವರಿಗೆ ಮನದಟ್ಟಾದರೆ ಅವರು ಆರು ತಿಂಗಳುಗಳನ್ನು ಮೀರಿದ ಅಮಾನತ್ತಿನ ಅವಧಿಯ ವಿಸ್ತರಣೆಯನ್ನು ಅನುಮತಿಸಬಹುದು.*

*(ಸಿ) ನೌಕರನನ್ನು ಅಮಾನತ್ತಿನಲ್ಲಿಟ್ಟಿರುವ ಆಡಳಿತ ಸಮಿತಿಯು, ಆದೇಶದಲ್ಲಿ ನೀಡಲಾದ ಸನ್ನಿವೇಶಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಕೂಡಲೇ ವರದಿ ಮಾಡತಕ್ಕದ್ದು;*

*(ಡಿ) ನಿಯಮಿಸಲಾದಂಥ ನಿಯಮಗಳಿಗೊಳಪಟ್ಟು ಈ ಪ್ರಕರಣದ ಮೇರೆಗೆ ಅಮಾನತ್ತಿನಲ್ಲಿಡಲಾದ ಪ್ರತಿಯೊಬ್ಬ ನೌಕರನು ನಿಯಮಿಸಬಹುದಾದಂಥ ಜೀವನ ನಿರ್ವಹಣಾ ಭತ್ಯೆಗೆ ಹಕ್ಕುಳ್ಳವನಾಗಿರತಕ್ಕದ್ದು.*

ದೀರ್ಘಕಾಲದ ಅವಧಿಯವರೆಗಿನ ನೌಕರನ ಅಮಾನತ್ತು ಕಾನೂನುಬದ್ಧವಾಗಿ ಸಮರ್ಥನೀಯವಾಗಿರುವುದಿಲ್ಲ. ನಿರ್ದಿಷ್ಟವಾಗಿ, ನೌಕರನು ಸಾಕ್ಷಿದಾರರನ್ನು ಪ್ರಭಾವಿಸಲು ಅಥವಾ ದಾಖಲೆಗಳನ್ನು ದುರುದ್ದೇಶದಿಂದ ಬದಲಾಯಿಸುವ ಸ್ಥಾನದಲ್ಲಿರುವನು ಎಂಬ ಭಯವಿಲ್ಲದಿದ್ದಲ್ಲಿ ಕಾನೂನುಬದ್ಧವಾಗಿ ಸಮರ್ಥಿಸಲಾಗುವುದಿಲ್ಲ. ಸಂಬಂಧಪಟ್ಟ

ಅಧಿಕಾರಿಯು ಸಂಬಂಧಪಟ್ಟ ನೌಕರನು ದಾಖಲೆಗಳನ್ನು ದುರುದ್ದೇಶದಿಂದ ಬದಲಾಯಿಸುವ ಅಥವಾ ಸಾಕ್ಷಿದಾರರನ್ನು ಪ್ರಭಾವಗೊಳಿಸುವ ಸಾಧ್ಯತೆ ಇಲ್ಲದಿದ್ದಾಗ ಅಮಾನತ್ತನ್ನು ಮುಂದುವರೆಸುವುದು ಅನಗತ್ಯವಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಆರೋಪ ಮೆಮೋವನ್ನು ಅಮಾನತ್ತು ಆದೇಶ ಹೊರಡಿಸಿದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಹೊರಡಿಸಲಾಗಿದೆ. ಆದಾಗ್ಯೂ, ಆರೋಪವನ್ನು ರೂಪಿಸಿದ ದಿನಾಂಕದಿಂದ ಏಳು ತಿಂಗಳುಗಳ ನಂತರವೂ ಶಿಸ್ತು ಕ್ರಮ ವ್ಯವಹರಣೆಗಳನ್ನು ಮುಂದುವರಿಸಿಲ್ಲ. ಆದುದರಿಂದ ಎದುರುದಾರನು ಇತ್ಯರ್ಥದಲ್ಲಿರುವ ಶಿಸ್ತು ವ್ಯವಹರಣೆಯ ಅಮಾನತ್ತು ಆದೇಶವನ್ನು ರದ್ದುಗೊಳಿಸಬೇಕು.

ಹಿಂದೆ ಹೇಳಲಾದ ಕಾರಣಗಳಿಗಾಗಿ, ಈ ರಿಟ್ ಅರ್ಜಿಯನ್ನು ಪುರಸ್ಕರಿಸಿದ್ದು, ದಿನಾಂಕ: 15.5.2014ರ ಅಮಾನತ್ತು ಆದೇಶ (ಅನುಬಂಧ–ಎ)ವನ್ನು ತಳ್ಳಿಹಾಕಲಾಗಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. ಸಿಡಿಎಲ್‌ಜೆ 2015 ಎಸ್‌ಸಿ 129<br>ಅಜಯ್ ಕುಮಾರ್ ಚೌಧರಿ –ವಿರುದ್ಧ–<br>ಭಾರತ ಒಕ್ಕೂಟ ಅದರ ಕಾರ್ಯದರ್ಶಿ ಮೂಲಕ<br>ಮತ್ತು ಮತ್ತೊಬ್ಬರು* | *(ಉಲ್ಲೇ) 4* |

ಅರ್ಜಿದಾರರ ಪರ : ಶ್ರೀ ಎಂ.ಎಸ್. ಭಾಗವತ್, ವಕೀಲರು ಇವರ ಪರವಾಗಿ ಶ್ರೀ ಪೃಥ್ವೀಶ್ ಎಂ.ಕೆ., ವಕೀಲರು

ಪ್ರತ್ಯರ್ಜಿದಾರರ ಪರ : ಶ್ರೀ ಕೆ.ಸಿ. ಶಾಂತಕುಮಾರ್, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಪಿ.ಬಿ. ಬಜಂತ್ರಿ:**

ಅರ್ಜಿದಾರಳು ಎರಡನೇ ಎದುರುದಾರ – ಕಾಲೇಜಿನಲ್ಲಿ ಪರಿಚಾರಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ. ಅವಳನ್ನು ಅಮಾನತು ಆದೇಶದಲ್ಲಿ ತಿಳಿಸಲಾದಂತೆ ಕೆಲವು ದುರ್ನಡತೆಯ ಆಧಾರದ ಮೇಲೆ ದಿನಾಂಕ: 15.5.2014ರಂದು ಅಮಾನತ್ತಿನಲ್ಲಿ ಇರಿಸಲಾಗಿದೆ. ಅಮಾನತ್ತಿನ ಆದೇಶದಿಂದ ಬಾಧಿತಳಾಗಿ ಮೇಲಿನ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾಳೆ.

2. ಅರ್ಜಿದಾರಳ ವಕೀಲರಾದ ಶ್ರೀ ಪೃಥ್ವೀಶ್ ಎಂ.ಕೆ. ಇವರು, ಅಮಾನತ್ತಿನ ಆದೇಶವನ್ನು ಹೊರಗಿನ ಕಾರಣಗಳಿಗಾಗಿ ಹೊರಡಿಸಲಾಗಿದೆ ಎಂದರೆ ಮೊದಲಿನ ವಜಾ ಆದೇಶವನ್ನು, ಅವಳು ಸೇವೆಯಲ್ಲಿದ್ದಾಗ ಹೊರಡಿಸಲಾಗಿತ್ತು. ಇದಾದ ನಂತರ ನ್ಯಾಯಾಲಯ ಆದೇಶದ ಕಾರಣದಿಂದ, ಅವಳನ್ನು ಪುನರ್ ನೇಮಕ ಮಾಡಲಾಗಿತ್ತು ಎಂದು ವಾದಿಸಿದ್ದಾರೆ. ಅಷ್ಟೇ ಅಲ್ಲದೆ, ಅಮಾನತ್ತಿನ ಆದೇಶವನ್ನು ವಿವೇಚನೆಯನ್ನು ಮಾಡದೆ ಹೊರಡಿಸಲಾಗಿದೆಯೆಂದು ವಾದಿಸಿದ್ದಾರೆ.

3. ಎದುರುದಾರರನ್ನು ಪ್ರತಿನಿಧಿಸಿರುವ ಮಾನ್ಯ ವಕೀಲರಾದ ಶ್ರೀ ಕೆ.ಸಿ. ಶಾಂತಕುಮಾರ್‌ರವರು ತಾನು ಆಕ್ಷೇಪಗಳ ಹೇಳಿಕೆಯನ್ನು ಸಲ್ಲಿಸಿಲ್ಲವೆಂದು ನಿವೇದಿಸಿದ್ದಾರೆ. ಆದಾಗ್ಯೂ, ನಾನು ವಿಲೇವಾರಿಗಾಗಿ ಮೆಮೊ ಸಲ್ಲಿಸಿರುತ್ತೇನೆ. ಮೆಮೋದಲ್ಲಿ, ದಿನಾಂಕ: 08.07.2014ರಂದು ಆರೋಪಗಳನ್ನು ರೂಪಿಸುವ ಮೂಲಕ ವಿಚಾರಣೆಯನ್ನು ನಡೆಸಲಾಗಿತ್ತೆಂದು ತಿಳಿಸಿದ್ದಾರೆ ಮತ್ತು ಇದನ್ನು ಶೀಘ್ರ ಅಂಚೆ (Speed post) ಮೂಲಕ ಅರ್ಜಿದಾರರಿಗೆ ಕಳುಹಿಸಲಾಗಿದೆಯೆಂದು ತಿಳಿಸಿದ್ದಾರೆ ಮತ್ತು ಇದನ್ನು ತಲುಪಿಸದೆ ಹಿಂದಿರುಗಿಸಲಾಗಿತ್ತೆಂದು ತಿಳಿಸಿದ್ದಾರೆ. ಆದಾಗ್ಯೂ, ಫೆಬ್ರವರಿ 2015ರ 2ನೇ ವಾರದ ಅವಧಿಯಲ್ಲಿ ಪ್ರಸ್ತುತ ವ್ಯವಹರಣೆಯಲ್ಲಿ ಅರ್ಜಿದಾರರ ವಕೀಲರಿಗೆ ಚಾರ್ಜ್ ಮೆಮೊ ಹೊರಡಿಸಲಾಗಿದೆ.

4. ಅರ್ಜಿದಾರರ ವಕೀಲರು, ವರದಿಯಾದ ***ಅಜಯ್ ಕುಮಾರ್ ಚೌಧರಿ –ವಿರುದ್ಧ– ಭಾರತ ಒಕ್ಕೂಟ ಅದರ ಕಾರ್ಯದರ್ಶಿ ಮೂಲಕ ಮತ್ತು ಮತ್ತೊಬ್ಬರು***[1] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಈ ಪ್ರಕರಣವನ್ನು ಬೆಂಬಲಿಸುವಲ್ಲಿ ಅವಲಂಬಿಸಿದ್ದಾರೆ. ಸರ್ವೋಚ್ಚ ನ್ಯಾಯಾಲಯವು, ನೌಕರನನ್ನು ದೀರ್ಘಕಾಲದ ಅವಧಿಯವರೆಗೆ ಅಮಾನತ್ತಿನಲ್ಲಿಡಲು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟಿದೆ. ತೀರ್ಪಿನ ಉದ್ಧೃತ ಭಾಗವನ್ನು ಇಲ್ಲಿ ಮರು ಹಾಜರುಪಡಿಸಲಾಗಿದೆ:

> *"14. ಆದುದರಿಂದ ನಾವು, ಈ ಅವಧಿಯೊಳಗೆ ಆರೋಪಗಳ/ಆರೋಪ ಪಟ್ಟಿಯ ಜ್ಞಾಪನವನ್ನು ಕರ್ತವ್ಯಭ್ರಷ್ಟ ಅಧಿಕಾರಿ/ನೌಕರರಿಗೆ ಜಾರಿಗೊಳಿಸದಿದ್ದರೆ ಅಮಾನತ್ತಿನ ಜಾರಿ ಆದೇಶವನ್ನು ಮೂರು ತಿಂಗಳುಗಳ ನಂತರ ನೀಡಬಾರದು; ಆರೋಪಗಳು/ಆರೋಪಪಟ್ಟಿಯ ವಿವರಣಾ ಪತ್ರವನ್ನು ನೀಡಿದರೆ, ವಿಸ್ತೃತ ಅಮಾನತು ಆದೇಶದ ಸಂಬಂಧ ಸಕಾರಣ ಆದೇಶವನ್ನು ಹೊರಡಿಸಲೇಬೇಕು. ನಮ್ಮ ಮುಂದಿರುವ ಪ್ರಕರಣದಲ್ಲಿ, ಸರ್ಕಾರವು, ಸಂಬಂಧಪಟ್ಟ ವ್ಯಕ್ತಿಯನ್ನು, ರಾಜ್ಯದ ಒಳಗಿನ ಅಥವಾ ಹೊರಗಿನ ಯಾವುದೇ ಕಚೇರಿಗಳಲ್ಲಿ ಯಾವುದೇ ಇಲಾಖೆಗೆ ವರ್ಗಾಯಿಸಲು ಮುಕ್ತವಾಗಿರುತ್ತದೆ. ಆ ಸಲುವಾಗಿ, ಅವನು ಯಾವುದೇ ಸ್ಥಳೀಯ ಅಥವಾ ಹೊಂದಿರಬಹುದಾದ ಯಾವುದೇ ವೈಯಕ್ತಿಕ ಸಂಪರ್ಕವನ್ನು ವಿಭಜಿಸಬಹುದು ಮತ್ತು ಅವನ ವಿರುದ್ಧದ ತನಿಖೆಯನ್ನು ತಡೆಯುವ ಸಂಬಂಧ ಅವನು ದುರ್ಬಳಕೆ ಮಾಡಿಕೊಳ್ಳಬಹುದು. ಸರ್ಕಾರವು, ಅವನನ್ನು ಯಾವುದೇ ವ್ಯಕ್ತಿಯನ್ನು ಸಂಪರ್ಕಿಸುವುದರಿಂದ ಅಥವಾ ದಾಖಲೆಗಳು ಹಾಗೂ ದಸ್ತಾವೇಜುಗಳನ್ನು ಅವನ ಪ್ರತಿವಾದ ಸಿದ್ಧಪಡಿಸಿರುವ ಅವನ ಹಂತದವರೆಗೆ ನಿಷೇಧಿಸಬಹುದು. ಸಾರ್ವತ್ರಿಕವಾಗಿ ಗುರುತಿಸಲಾದ ಮಾನವೀಯ ಗೌರವದ ತತ್ವ ಮತ್ತು*

1. ಸಿಡಿಜೆ 2015 ಎಸ್‌ಸಿ 129

*ತ್ವರಿತ ಅಧಿವಿಚಾರಣೆ ಹಕ್ಕು ಇದು ಸಾಕಷ್ಟು ಸುರಕ್ಷಿತ ಎಂದು ಭಾವಿಸುತ್ತೇವೆ ಹಾಗೂ ಪ್ರಾಸಿಕ್ಯೂಷನ್‌ನಲ್ಲಿ ಸರ್ಕಾರದ ಹಿತಾಸಕ್ತಿಯನ್ನೂ ಕಾಪಾಡತಕ್ಕದ್ದು. ನಾವು ಪೂರ್ವ ಸಂವಿಧಾನ ಪೀಠಗಳು, ವಿಳಂಬದ ಆಧಾರಗಳ ಮೇಲೆ ವ್ಯವಹರಣೆಗಳನ್ನು ರದ್ದುಗೊಳಿಸಲು ಹಾಗೂ ಅವರ ಅವಧಿಗೆ ಕಾಲಮಿತಿಗಳನ್ನು ಮಿತಿಗೊಳಿಸಲು ಹಿಂಜರಿಯಲಾಗಿದೆ. ಆದಾಗ್ಯೂ, ಅಮಾನತ್ತಿನ ಅವಧಿಯ ಮಿತಿಯನ್ನು ಹೇರುವಿಕೆಯನ್ನು ಮೊದಲಿನ ತೀರ್ಪು ಜನ್ಯ ಕಾನೂನಿನಲ್ಲಿ ಚರ್ಚಿಸಿಲ್ಲ ಮತ್ತು ಕಾನೂನಿನ ಹಿತಾಸಕ್ತಿಗೆ ವಿರುದ್ಧವಾಗಿರಲಿಲ್ಲ. ಅಷ್ಟೇ ಅಲ್ಲದೆ, ಅಪರಾಧ ತನಿಖಾ ಇಲಾಖಾ ವಿಚಾರಣೆಗಳನ್ನು ಇತ್ಯರ್ಥದಲ್ಲಿಡುವುದು ಎಂದರೆ, ನಾವು ಅಳವಡಿಸಿಕೊಂಡ ನಿಲುವನ್ನು ದೃಷ್ಟಿಯಲ್ಲಿಟ್ಟುಕೊಂಡು ರದ್ದುಗೊಳಿಸಲಾದ ನಿಲುವುಗಳನ್ನು ತಡೆಹಿಡಿಯಬೇಕು ಎಂಬುದು ಬಾಕಿಯಿರುವ ಕೇಂದ್ರ ವಿಚಕ್ಷಣಾ ಆಯೋಗದ ಸೂಚನೆಯಾಗಿದೆ".*

ಆದುದರಿಂದ, ಅರ್ಜಿದಾರನನ್ನು, ಅಮಾನತ್ತಿನಲ್ಲಿಟ್ಟು ಅವನನ್ನು ಮುಂದುವರಿಸಲು ಯಾವುದೇ ಕಾರಣಗಳನ್ನು ನೀಡದಿರುವುದರಿಂದ ಅರ್ಜಿದಾರನನ್ನು ಪುನರ್ ನೇಮಕ ಮಾಡಲು ಹಕ್ಕುಳ್ಳವನಾಗಿರುವನು ಎಂದು ಅರ್ಜಿದಾರರ ವಕೀಲರು ನಿವೇದಿಸಿದ್ದಾರೆ.

5. ದಿನಾಂಕ:08.07.2014ರಂದು ಆರೋಪವನ್ನು ರೂಪಿಸುವುದನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಮಾನತ್ತಿನಲ್ಲಿರುವ ನೌಕರನನ್ನು, ಇಟ್ಟಿರುವ ಉದ್ದೇಶ, ಅವನು ಸಾಕ್ಷಿದಾರರನ್ನು ಅಥವಾ ದಾಖಲೆಗಳನ್ನು ದುರುದ್ದೇಶದಿಂದ ಬದಲಾಯಿಸುವುದಿಲ್ಲ. ನೋಡುವುದಾಗಿರುವುದರಿಂದ ಅರ್ಜಿದಾರನನ್ನು ಪುನರ್ ನೇಮಕ ಮಾಡಲು ಹಕ್ಕುಳ್ಳವನಾಗಿರುತ್ತಾನೆ. ಪ್ರಸ್ತುತ ಪ್ರಕರಣದಲ್ಲಿ, ದುರುದ್ದೇಶದಿಂದ ದಾಖಲೆಗಳನ್ನು ಮತ್ತು ಸಾಕ್ಷಿದಾರರನ್ನು ಬದಲಾಯಿಸುವ ಪ್ರಶ್ನೆಯು ಉದ್ಭವಿಸುವುದಿಲ್ಲ. ಆರೋಪಗಳ ವಸ್ತುಗಳನ್ನು ಹೊರಡಿಸುವುದನ್ನು

ದೃಷ್ಟಿಯಲ್ಲಿಟ್ಟುಕೊಂಡು ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ನಿರ್ಣಯವು, ಅಮಾನತ್ತಿನ ಆದೇಶವನ್ನು ಜಾರಿಗೊಳಿಸುವುದನ್ನು ಮೂರು ತಿಂಗಳುಗಳನ್ನು ಮೀರಿ ವಿಸ್ತರಿಸಬಾರದು ಎಂಬುದನ್ನು ಸ್ಫಟಿಕದಷ್ಟು ಸ್ಪಷ್ಟಪಡಿಸಿದೆ. ಆದಾಗ್ಯೂ, ಈ ಅವಧಿಯೊಳಗೆ, ಆರೋಪಗಳು/ಆರೋಪ ಪಟ್ಟಿಯ ಮೆಮೊವನ್ನು ಕರ್ತವ್ಯಭ್ರಷ್ಟ ಅಧಿಕಾರಿ/ನೌಕರನಿಗೆ ಹೊರಡಿಸದೆ ಅಮಾನತು ಆದೇಶವನ್ನು ಹಿಂಪಡೆಯಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಆರೋಪ ಮೆಮೊವನ್ನು ಸಿದ್ಧಪಡಿಸಿ, ಹೊರಡಿಸಿದ್ದರೂ, ಅದನ್ನು ಅರ್ಜಿದಾರನಿಗೆ ಹೊರಡಿಸಿರಲಿಲ್ಲ. ಆದಾಗ್ಯೂ, ಮೇಲಿನ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಆರೋಪ ಮೆಮೊದ ಪ್ರತಿಯನ್ನು ಅರ್ಜಿದಾರರ ವಕೀಲರಿಗೆ ಹೊರಡಿಸಲಾಗಿದೆ.

6. ಎದುರುದಾರರು ದಿನಾಂಕ: 8.7.2014ರ ತಾವೇ ಶಿಸ್ತು ಕ್ರಮ ವ್ಯವಹರಣೆಗಳನ್ನು ಪ್ರಾರಂಭಿಸಿದ್ದು, ತ್ವರಿತ ಅಂಚೆಯನ್ನು ದಿನಾಂಕ: 10/11.7.2014ರಂದು ''ಅಂಥ ವ್ಯಕ್ತಿಯು ಕಳುಹಿಸಿದಾತನಿಗೆ ಹಿಂತಿರುಗಿಸಿರುವುದರಿಂದ'' ಎಂಬ ಷರಾದೊಂದಿಗೆ ಹಿಂತಿರುಗಿಸಿರುವುದರಿಂದ ಇದನ್ನು ಜಾರಿಗೊಳಿಸಿರುವುದಿಲ್ಲ ಎಂದು ವಾದಿಸಿದ್ದಾರೆ. ಮೇಲಿನ ರಿಟ್ ಅರ್ಜಿಯನ್ನು ದಿನಾಂಕ 22.5.2014ರಂದು ಸಲ್ಲಿಸಿದ್ದು, ತುರ್ತು ನೋಟೀಸನ್ನು ದಿನಾಂಕ 27.05.2014ರಂದು ಆದೇಶಿಸಲಾಗಿತ್ತು. ದಿನಾಂಕ 03.06.2014ರಂದು, ಎದುರುದಾರರ ಪರವಾಗಿ ಮಾನ್ಯ ವಕೀಲರಾದ ಶ್ರೀ ಕೆ.ಸಿ. ಶಾಂತಕುಮಾರ್‌ರವರು ವಕಾಲತ್ತನ್ನು ಸಲ್ಲಿಸಿದ್ದಾರೆ. ದಿನಾಂಕ: 15.7.2014ರಂದು ಎದುರುದಾರರು, ದಿನಾಂಕ:8.7.2014ರ ಶಿಸ್ತುಕ್ರಮ ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ವಿಲೇವಾರಿಗಾಗಿ ಮೆಮೊವನ್ನು ಸಲ್ಲಿಸಿದ್ದಾರೆ. ಈ ಹಿನ್ನಲೆಯಲ್ಲಿ, ಎದುರುದಾರರು ಅಮಾನತ್ತಿನ ಆದೇಶವನ್ನು ಪುನರವಲೋಕಿಸಿಲ್ಲ ಅಥವಾ ಶಿಸ್ತು ಕ್ರಮ ವ್ಯವಹರಣೆಗಳನ್ನೂ ಪ್ರಾರಂಭಿಸಿಲ್ಲ. ಆದುದರಿಂದ ಫೆಬ್ರವರಿ 2015ರ 2ನೇ ವಾರದಲ್ಲಿಯೇ ಅರ್ಜಿದಾರನ ವಕೀಲರಿಗೆ ಜಾರಿಗೊಳಿಸಲಾಗಿತ್ತು. ಶಿಕ್ಷಕ/ನೌಕರನ ಅಮಾನತನ್ನು ರೂಪಿಸಿರುವ ಕಾನೂನಿನ ಉಪಬಂಧವನ್ನು ಇಲ್ಲಿ ಮರು ಹಾಜರುಪಡಿಸಲಾಗಿದೆ:

ಕರ್ನಾಟಕ ಶಿಕ್ಷಣ ಅಧಿನಿಯಮದ 93(3)(ಎ)(i) ಪ್ರಕರಣದ ಮೇರೆಗೆ ಆಡಳಿತ ಸಮಿತಿಯು, ನೌಕರನನ್ನು ಅಮಾನತ್ತಿನಲ್ಲಿಡಬಹುದಾಗಿದ್ದು, ಅದು ಈ ಮುಂದಿನಂತಿರುತ್ತದೆ:

*"(3) ಒಬ್ಬ ಶಿಕ್ಷಕ ಅಥವಾ ಇತರ ನೌಕರನನ್ನು ಆಡಳಿತ ಸಮಿತಿಯು ಅಮಾನತ್ತಿನಲ್ಲಿಡಬಹುದು.–*

*(i) ಶಿಸ್ತು ವ್ಯವಹರಣೆಗಳನ್ನು ಅವನ ವಿರುದ್ಧ ಉದ್ದೇಶಿಸಲಾಗಿದ್ದಲ್ಲಿ ಅಥವಾ ಇತ್ಯರ್ಥದಲ್ಲಿದ್ದಲ್ಲಿ; ಅಥವಾ*

*(ii) ಯಾವುದೇ ಆಪರಾಧಿಕ ಅಪರಾಧಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧ ತನಿಖೆಯನ್ನು ಅಥವಾ ಅಧಿವಿಚಾರಣೆಯನ್ನು ಮಾಡುವಂತಿದ್ದಲ್ಲಿ;*

*(ಬಿ) ಅಂಥ ಅಮಾನತನ್ನು ಆರು ತಿಂಗಳುಗಳಿಗಿಂತ ಹೆಚ್ಚು ಕಾಲ ಜಾರಿಯಲ್ಲಿಡತಕ್ಕದ್ದಲ್ಲ:*

*ಪರಂತು, ಆರು ತಿಂಗಳುಗಳ ಒಳಗೆ ವಿಚಾರಣೆಯನ್ನು ಮಾಡಲು ಉದ್ದೇಶಿಸಿದ್ದರೆ, ಕಾರ್ಯದರ್ಶಿಯು ಸಕ್ಷಮ ಪ್ರಾಧಿಕಾರಿಗೆ ವಿಷಯವನ್ನು ವರದಿ ಮಾಡತಕ್ಕದ್ದು. ಆಡಳಿತ ಮಂಡಳಿಯ ನಿಯಂತ್ರಣವನ್ನು ಮೀರಿರುವ ಸನ್ನಿವೇಶಗಳ ಕಾರಣದಿಂದ ವಿಚಾರಣೆಯನ್ನು ಹಾಗೆ ಉದ್ದೇಶಿಸಬಹುದಾಗಿದೆಯೆಂದು ಅವರಿಗೆ ಮನದಟ್ಟಾದರೆ ಅವರು ಆರು ತಿಂಗಳುಗಳನ್ನು ಮೀರಿದ ಅಮಾನತ್ತಿನ ಅವಧಿಯ ವಿಸ್ತರಣೆಯನ್ನು ಅನುಮತಿಸಬಹುದು.*

*(ಸಿ) ನೌಕರನನ್ನು ಅಮಾನತ್ತಿನಲ್ಲಿಟ್ಟಿರುವ ಆಡಳಿತ ಸಮಿತಿಯು, ಆದೇಶದಲ್ಲಿ ನೀಡಲಾದ ಸನ್ನಿವೇಶಗಳನ್ನು ಸಕ್ಷಮ ಪ್ರಾಧಿಕಾರಕ್ಕೆ ಕೂಡಲೇ ವರದಿ ಮಾಡತಕ್ಕದ್ದು;*

*(ಡಿ) ನಿಯಮಿಸಲಾದಂಥ ನಿಯಮಗಳಿಗೊಳಪಟ್ಟು ಈ ಪ್ರಕರಣದ ಮೇರೆಗೆ ಅಮಾನತ್ತಿನಲ್ಲಿಡಲಾದ ಪ್ರತಿಯೊಬ್ಬ ನೌಕರನು ನಿಯಮಿಸಬಹುದಾದಂಥ ಜೀವನ ನಿರ್ವಹಣಾ ಭತ್ಯೆಗೆ ಹಕ್ಕುಳ್ಳವನಾಗಿರತಕ್ಕದ್ದು."*

ಎದುರುದಾರರ ವಕೀಲರು, ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 92ನೇ ಪ್ರಕರಣದ (3)(ಬಿ) ಮತ್ತು (ಸಿ) ಪ್ರಕರಣವನ್ನು ಪಾಲಿಸಿರುವುದಕ್ಕೆ ಸಂಬಂಧಪಟ್ಟಿರುವುದನ್ನು ತೋರಿಸುವ ಯಾವುದೇ ಸಾಕ್ಷ್ಯಾಧಾರವನ್ನು ಹಾಜರುಪಡಿಸಿರುವುದಿಲ್ಲ. ತತ್ಪರಿಣಾಮವಾಗಿ, ಅಮಾನತ್ತಿನ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಆರು ತಿಂಗಳ ನಂತರ ಅಮಾನತ್ತಿನ ಆದೇಶವು ಕಾನೂನಿನ ಕಣ್ಣಿನಲ್ಲಿ ಅಸ್ತಿತ್ವದಲ್ಲಿರುವುದಿಲ್ಲ.

7. ಅಮಾನತ್ತನ್ನು, ಒಬ್ಬರ ಪದ ಅಥವಾ ಸ್ಥಾನಮಾನವನ್ನು ತಾತ್ಕಾಲಿಕವಾಗಿ ಇಳಿಸುವುದೆಂದು ಪರಿಭಾಷಿಸಲಾಗಿದೆ. ಅಮಾನತು ಎಂಬುದು ನೌಕರಿದಾತ ಮತ್ತು ನೌಕರನ ನಡುವಿನ ಒಡೆಯ ಮತ್ತು ಸೇವಕನ ಸಂಬಂಧವನ್ನು ಕೊನೆಗೊಳಿಸುವುದಾಗಿರುವುದಿಲ್ಲ. ಇದು ಅವನ/ಅವಳ ವಿರುದ್ಧದ ಕೆಲವು ಇಲಾಖಾ/ಆಂತರಿಕ/ಆಪರಾಧಿಕ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿನ ಕಾರ್ಯದಿಂದ ನೌಕರನನ್ನು ಸರಳವಾಗಿ ದೂರವಿಡುವುದಾಗಿದೆ. ನೌಕರನನ್ನು ಅಮಾನತ್ತಿನಲ್ಲಿಡುವ ಧ್ಯೇಯೋದ್ದೇಶ ಮತ್ತು ಉದ್ದೇಶ ಏನೆಂದರೆ, ವಿಚಾರಣೆ ನಡೆಸುವುದರಲ್ಲಿ ಅವನು ಹಸ್ತಕ್ಷೇಪ ಮಾಡಬಹುದಾಗಿದ್ದಲ್ಲಿ ಅಥವಾ ದಸ್ತಾವೇಜನ್ನು ಅಥವಾ ಮೌಖಿಕ ಸಾಕ್ಷ್ಯವನ್ನು ಯಾವುದೇ ರೀತಿಯಲ್ಲಿ ದುರುದ್ದೇಶದಿಂದ ಬದಲಾಯಿಸುವಂತಿದ್ದಲ್ಲಿ ಅಥವಾ ಅವನ ವಿರುದ್ಧದ ಆರೋಪಗಳ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು

ಹುದ್ದೆಯ ಅಧಿಕಾರವನ್ನು ಅವನಿಗೆ/ಅವಳಿಗೆ ನಿಹಿತಗೊಳಿಸುವುದನ್ನು ಮುಂದುವರೆಸುವುದು ಅಸುರಕ್ಷಿತ ಎಂದು ಭಾವಿಸಿದಲ್ಲಿ, ಅವನನ್ನು ಆ ಸ್ಥಾನದಿಂದ ದೂರವಿಡುವುದಾಗಿದೆ. ಕರ್ತವ್ಯಭ್ರಷ್ಟ ನೌಕರನು ಅಮಾನತಿನಲ್ಲಿದ್ದಾಗ, ಇಲಾಖಾ ವ್ಯವಹರಣೆಗಳನ್ನು ಯುಕ್ತ, ಜಾಗರೂಕತೆಯೊಂದಿಗೆ ಹಾಗೂ ಸಮುಚಿತ ಕಾಲಾವಧಿಯೊಳಗೆ ಮುಕ್ತಾಯಗೊಳಿಸಬೇಕು ಎಂಬುದನ್ನು ಮನವರಿಕೆ ಮಾಡಿಕೊಡಲು ಹಕ್ಕುಳ್ಳವರಾಗಿರುವರು ಎಂಬುದು ಸ್ವಾಭಾವಿಕ ನ್ಯಾಯದ ತತ್ವವಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಅಂಥ ತತ್ವವನ್ನು ಗುರುತಿಸಲಾಗದಿದ್ದರೆ, ಇದು ಅನಿರ್ದಿಷ್ಟ ಅವಧಿಗೆ ತನ್ನ ಅಧಿಕಾರಿಗಳನ್ನು ಅಶಕ್ತರಾಗಿ ಹಾಗೂ ಅಪನಂಬಿಕೆಯಲ್ಲಿ ಇಟ್ಟಿರುವ ಒಟ್ಟಾರೆಯಾಗಿ ಕಾರ್ಯ ನಿರ್ವಹಣೆಯು ಮನಬಂದಂತೆ ಹಾಗೂ ಶೃಂಖಲೆಯಲ್ಲಿರುವುದು ವ್ಯಕ್ತವಾಗುತ್ತದೆ. ಒಟ್ಟು ಅಮಾನತ್ತಿನ ಅವಧಿ ಎಂದರೆ ತನಿಖಾ ಹಾಗೂ ಶಿಸ್ತು ವ್ಯವಹರಣೆಗಳೆರಡಕ್ಕೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಇದು ಆರು ತಿಂಗಳುಗಳನ್ನು ಮೀರಬಾರದು. ಅಸಾಧಾರಣ ಸಂದರ್ಭಗಳಲ್ಲಿ, ಆರು ತಿಂಗಳುಗಳ ಸದರಿ ಕಾಲಮಿತಿಗೆ ಅಂಟಿಕೊಳ್ಳುವುದು ಸಾಧ್ಯವಾಗದಿದ್ದ ಸಂದರ್ಭದಲ್ಲಿ, ಶಿಸ್ತು ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರವು ಅಮಾನತನ್ನು ಮುಂದುವರಿಸಲು ಕಾರಣಗಳನ್ನು ದಾಖಲಿಸುವ ಮೂಲಕ ಅಮಾನತ್ತಿನ ಪುನರ್ ಪರಿಶೀಲನೆಯನ್ನು ಕೈಗೆತ್ತಿಕೊಳ್ಳಬೇಕು. ನಿಯತಕಾಲಿಕವಾಗಿ, ಅಮಾನತ್ತನ್ನು ಪುನರ್ ಪರಿಶೀಲಿಸುವಷ್ಟರಮಟ್ಟಿಗೆ ಸರ್ಕಾರವು, ಕಾಲಕಾಲಕ್ಕೆ 3 ತಿಂಗಳಿಗೊಮ್ಮೆ ಅಥವಾ ಆರು ತಿಂಗಳುಗಳಿಗೊಮ್ಮೆ ಆರೋಪಪಟ್ಟಿ/ ಆರೋಪ ಮೆಮೊವನ್ನು ನೀಡದೆ ಸುದೀರ್ಘವಾದ ಅಮಾನತ್ತಿನ ಪುನರ್ ಪರಿಶೀಲನೆಯಂಥ ಮಾರ್ಗಸೂಚಿಗಳನ್ನು ಹೊರಡಿಸಬೇಕು. ವಿರಳ ಸಂದರ್ಭಗಳಲ್ಲಿ ಕಾನೂನಿನ ನ್ಯಾಯಾಲಯಗಳು ಅಮಾನತುಗೊಂಡ ನೌಕರನ ವಿರುದ್ಧ ವ್ಯವಹರಣೆಗಳನ್ನು ಪ್ರಾರಂಭಿಸಬಾರದು ಎನ್ನುವ ಕಾರಣಕ್ಕಾಗಿ ಅಮಾನತು ಆದೇಶದಲ್ಲಿ ಹಸ್ತಕ್ಷೇಪ ಮಾಡಿ ರದ್ದುಗೊಳಿಸಿದೆ. ಮತ್ತೊಂದು ಕಡೆ, ದೀರ್ಘಕಾಲದ ಅವಧಿಯವರೆಗಿನ ನೌಕರನ ಅಮಾನತ್ತು ಕಾನೂನುಬದ್ಧವಾಗಿ ಸಮರ್ಥನೀಯವಾಗಿರುವುದಿಲ್ಲ. ನಿರ್ದಿಷ್ಟವಾಗಿ, ನೌಕರನು ಸಾಕ್ಷಿದಾರರನ್ನು ಪ್ರಭಾವಿಸಲು ಅಥವಾ ದಾಖಲೆಗಳನ್ನು ದುರುದ್ದೇಶದಿಂದ ಬದಲಾಯಿಸುವ ಸ್ಥಾನದಲ್ಲಿರುವನು ಎಂಬ ಭಯವಿಲ್ಲದಿದ್ದಲ್ಲಿ ಕಾನೂನುಬದ್ಧವಾಗಿ ಸಮರ್ಥಿಸಲಾಗುವುದಿಲ್ಲ. ಸಂಬಂಧಪಟ್ಟ ಅಧಿಕಾರಿಯು

ಸಂಬಂಧಪಟ್ಟ ನೌಕರನು ದಾಖಲೆಗಳನ್ನು ದುರುದ್ದೇಶದಿಂದ ಬದಲಾಯಿಸುವ ಅಥವಾ ಸಾಕ್ಷಿದಾರರನ್ನು ಪ್ರಭಾವಗೊಳಿಸುವ ಸಾಧ್ಯತೆ ಇಲ್ಲದಿದ್ದಾಗ ಅಮಾನತ್ತನ್ನು ಮುಂದುವರೆಸುವುದು ಅನಗತ್ಯವಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಆರೋಪ ಮೆಮೊವನ್ನು ಅಮಾನತ್ತು ಆದೇಶ ಹೊರಡಿಸಿದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ಹೊರಡಿಸಲಾಗಿದೆ. ಆದಾಗ್ಯೂ, ಆರೋಪವನ್ನು ರೂಪಿಸಿದ ದಿನಾಂಕದಿಂದ ಏಳು ತಿಂಗಳುಗಳ ನಂತರವೂ ಶಿಸ್ತು ಕ್ರಮ ವ್ಯವಹರಣೆಗಳನ್ನು ಮುಂದುವರಿಸಿಲ್ಲ. ಆದುದರಿಂದ ಎದುರುದಾರನು ಇತ್ಯರ್ಥದಲ್ಲಿರುವ ಶಿಸ್ತು ವ್ಯವಹರಣೆಯ ಅಮಾನತ್ತು ಆದೇಶವನ್ನು ರದ್ದುಗೊಳಿಸಬೇಕು. ಹೀಗಾಗಿ, ***ಅಜಯ್ ಕುಮಾರ್ ಚೌಧರಿ –ವಿರುದ್ಧ– ಭಾರತ ಒಕ್ಕೂಟ ಅದರ ಕಾರ್ಯದರ್ಶಿ ಮೂಲಕ ಮತ್ತು ಮತ್ತೊಬ್ಬರು*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ತತ್ವಗಳೊಂದಿಗೆ ಓದಲಾದ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ 92(3) (ಬಿ) ಮತ್ತು (ಸಿ) ಪ್ರಕರಣವನ್ನು ಅನುಸರಿಸದೆ ಇದ್ದು ಎದುರುದಾರನ ಪಾತ್ರ ಒಟ್ಟಾರೆ ನಿಷ್ಕ್ರೀಯವಾಗಿದೆ. ದಿನಾಂಕ: 15.5.2014ರ ಅಮಾನತು ಆದೇಶವನ್ನು (ಅನುಬಂಧ–ಎ) ಮುಂದುವರೆಸಲು ಯಾವುದೇ ಆಧಾರವಿರುವುದಿಲ್ಲ.

8. ಮೇಲೆ ಹೇಳಲಾದ ಕಾರಣಗಳಿಗಾಗಿ, ಈ ರಿಟ್ ಅರ್ಜಿಯನ್ನು ಪುರಸ್ಕರಿಸಿದ್ದು, ದಿನಾಂಕ: 15.5.2014ರ ಅಮಾನತ್ತು ಆದೇಶ (ಅನುಬಂಧ–ಎ)ವನ್ನು ತಳ್ಳಿಹಾಕಲಾಗಿದೆ. ಈ ಆದೇಶವು ಅರ್ಜಿದಾರನ ವಿರುದ್ಧ ಪ್ರಾರಂಭಿಸಲಾದ ಶಿಸ್ತು ವ್ಯವಹರಣೆಗಳನ್ನು ಪೂರ್ಣಗೊಳಿಸುವುದಕ್ಕೆ ಅಡ್ಡಿ ಬರುವುದಿಲ್ಲ.

ವೆಚ್ಚದ ಸಂಬಂಧದಲ್ಲಿ ಯಾವುದೇ ಆದೇಶವಿರುವುದಿಲ್ಲ.